ಮುಖ್ಯ ರಸ್ತೆಯನ್ನು 25.19 ಲಕ್ಷ ರೂ.ಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿ ಪಡಿಸಲಾಗಿದೆ. 75.00ಕೋಟಿ ರೂ.ಗಳ ಕಾರ್ಯಕ್ರಮದಡಿ ಚಿಕ್ಕಬಳ್ಳಾಪುರ- ಮೂಡಿಗೆರೆ (ರಾಜ್ಯ ಹೆದ್ದಾರಿ) ರಸ್ತೆಯ 5.0 ಕಿ.ಮಿ. ಉದ್ದವನ್ನು 16.00 ಲಕ್ಷ ರೂ.ಗಳ ಅಂದಾಜಿನಲ್ಲಿ ಅಭಿವೃದ್ಧಿ ಪಡಿಸಲಾಗುವುದು. ಅನುದಾನದ ಲಭ್ಯತೆಯ ಮೇಲೆ ಉಳಿದ ರಸ್ತೆಗಳ ಅಭಿವೃದ್ಧಿ ಕೆಲಸಗಳನ್ನು ಹಂತಹಂತವಾಗಿ ಕೈಗೆತ್ತಿಕೊಳ್ಳಲಾಗುವುದು.

ಚಿಕ್ಕಬಳ್ಳಾಪುರದಲ್ಲಿ ನ್ಯಾಯಾಲಯ ಸಂಕೀರ್ಣ ಕಟ್ಟಡ

1234 (1847) ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ.ವಿ. (ಚಿಕ್ಕಬಳ್ಳಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಬಳ್ಳಾಪುರದಲ್ಲಿ ನ್ಯಾಯಾಲಯ ಸಂಕೀರ್ಣ ಕಟ್ಟಡ ಕಟ್ಟಲು ಎರಡು ವರ್ಷಗಳ ಹಿಂದೆ ಮಂಜೂರಾತಿ ನೀಡುರವುದು ನಿಜವೇ;

ಆ) ಹಾಗಿದ್ದಲ್ಲಿ ಈವರೆಗೂ ಕಟ್ಟಡ ಕಾಮಗಾರಿಯು ಪ್ರಾರಂಭವಾಗದಿರಲಿಕ್ಕೆ ಕಾರಣಗಳೇನು;

ಇ) ಈ ಕಟ್ಟಡದ ಕೆಲಸವನ್ನು ಸರಕಾರ ಎಂದಿನಿಂದ ಪ್ರಾರಂಭಿಸುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸೇಡಂ ಕ್ಷೇತ್ರದ ರಸ್ತೆಗಳ ಅಭಿವೃದ್ಧಿ

1235 (1530) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಾಗ್ದಾರಿ ರೆಪ್ಪನ್‌ಪಲ್ಲಿ ಲೋಕೋಪಯೋಗಿ ರಸ್ತೆ (ಗುಲ್ಬರ್ಗಾ ಕೋಡಂಗಲ್) ಈ ರಸ್ತೆಯ ಮೇಲೆ ಸೇಡಂ ಕ್ಷೇತ್ರದ ವ್ಯಾಪಿಗೆ ಬರುವ ರಸ್ತೆಗೆ 1997-98ರಿಂದ 1999-200ವರೆಗೆ ವಿಶೇಷ ದುರಸ್ತಿ ಹಣದಲ್ಲಿ ಅಥವಾ ಬೇರೆ ಯೋಜನೆಯಾಗಲೀ ದುರಸ್ತಿಗೆ ತಗಲಿರುವ ಪೆಚ್ಚಪೆಷ್ಟು, ಕಿ.ಮಿ.ವಾರು ವರ್ಷಾವಾರು;

ಆ) ಪ್ರತಿ ವರ್ಷ ದುರಸ್ತಿಯಾದರೆ ಈಗಲೂ ಸಹ ಪ್ರತಿ ಕಿಮಿನಲ್ಲಿ ದೊಡ್ಡ ದೊಡ್ಡ ತೆಗ್ಗುಗಳು ಬಿದ್ದು ವಾಹನಗಳ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಈಗಲಾದರೂ ಸಹ ದುರಸ್ತಿಯಾಗದೇ ಇರುವ ಈ ರಸ್ತೆಯನ್ನು ದುರಸ್ತಿ ಮಾಡಿ ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದೇ?

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಸೇಡಂ ತಾಲ್ಲೂಕಿನ ವಾಗ್ದಾರಿ ರಿಬ್ಬನ್‌ಪಲ್ಲಿ ಲೋಕೋಪಯೋಗಿ ಇಲಾಖೆಯ (ಗುಲ್ಬರ್ಗಾ-ಕೋಡಂಗಲ್) ಈ ರಸ್ತೆಯು 49.0 ಕಿ.ಮಿ. ಸೇಡಂ ಕ್ಷೇತ್ರದ ವ್ಯಾಪ್ತಿಗೆ ಬರುತ್ತಿದ್ದು

1997-98 ರಿಂದ 1999-2000 ವಿಶೇಷ ದುರಸ್ತಿಯಲ್ಲಿ ವೆಚ್ಚ ಈ ಕೆಳಗಿನಂತೆ ಇದೆ.

ವರ್ಷ	ಕಿಮೀ	ವೆಚ್ಚ
1997-98	33.0	6.78 ಲಕ್ಷ ರೂ.
1998-99	49.2	14.46 ಲಕ್ಷ ರೂ.
1999-2000	8.0	4.62 ಲಕ್ಷ ರೂ.

ಆ) ರಸ್ತೆಯು ಪದೇ ಪದೇ ಹಾಳಾಗಿ ಹಲವೆಡೆ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಈಗ ದುರಸ್ತಿಯಾಗದೇ ಇರುವ ಆಯ್ದ ಭಾಗಗಳನ್ನು ಜಿಲ್ಲಾ ಮುಖ್ಯ ರಸ್ತೆ ರಾಜ್ಯ ಹೆದ್ದಾರಿಗಳ ಸುಧಾರಣೆಯನ್ನು 75.00 ಕೋಟಿ ರೂ.ಗಳ ಯೋಜನೆಯ ಅಡಿಯಲ್ಲಿ ಅಭಿವೃದ್ಧಿಪಡಿಸಲು ಯೋಚಿಸಿದೆ.

ಸೇಡಂ ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಮಿನಿ ವಿಧಾನಸೌಧ

1236 (1531) ಶ್ರೀ ಬಸವಂತ ರೆಡ್ಡಿ ಮಾತಕಪಲ್ಲಿ (ಸೇಡಂ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಮಿನಿ ವಿಧಾನ ಸೌಧ ಕಟ್ಟಡ ಪೂರ್ತಿಯಾಗದೇ ಈಗಾಗಲೇ ಬಿರುಕು ಬಿಟ್ಟು ಛತ್ತು ಸೋರುವುದು, ಬಾಗಿಲುಗಳು ಕಿಟಕಿಗಳು ಬಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಮಿನಿ ವಿಧಾನಸೌಧ 1994-95 ಸಾಲಿನಲ್ಲಿ ಪ್ರಾರಂಭವಾಗಿ ಇಲ್ಲಿಯವರೆಗೆ ಕೆಲಸ ಪೂರ್ತಿಯಾಗದೇ ಸ್ಥಗಿತಗೊಂಡಿರುವುದು ಏಕೆ? ಇದಕ್ಕೆ ತಗಲಿರುವ ವೆಚ್ಚ ಎಷ್ಟು?

ಇ) ಈ ನಿರ್ಮಾಣ ಹಂತದಲ್ಲಿ ಕಟ್ಟಡ ಬಿರುಕು ಬಿಟ್ಟು ಸೋರಿ ನಾದುರಸ್ತಿಯಾಗಿರುವುದಕ್ಕೆ ಜವಾಬ್ದಾರರು ಯಾರು? ಅವರ ವಿರುದ್ಧ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಆ) ಸೇಡಂ ಮಿನಿ ವಿಧಾನಸೌಧ ಕಟ್ಟಡ ಇನ್ನೂ ನಿರ್ಮಾಣದ ಹಂತದಲ್ಲಿದೆ. ಕಟ್ಟಡದಲ್ಲಿ ಎರಡು ಕಡೆ ಗಿಲಾವಿನಲ್ಲಿ ಬಿರುಕು ಬಿಟ್ಟಿರುತ್ತದೆ. ಆರ್.ಸಿ.ಸಿ. ಛತ್ತಿನಿಂದ ಕಟ್ಟಡದ ಯಾವ ಭಾಗದಲ್ಲಿಯೂ ಸೋರುವುದಿಲ್ಲ. ಬಾಗಿಲು ಮತ್ತು ಕಿಟಕಿಗಳಿಗೆ ಫ್ರೇಮ್‌ಗಳನ್ನು ಹಾಕಲಾಗಿದೆ. ಒಂದು ಫ್ರೇಮ್ ಮಾತ್ರ ಬಾಗಿದ್ದು, ಅದನ್ನು ಬದಲಾಯಿಸಲಾಗುವುದು.

ಆ) ಕಟ್ಟಡದ ಕೆಲಸವು ದಿನಾಂಕ:25-2-94ರಂದು ಪ್ರಾರಂಭವಾಗಿದೆ. ಒಪ್ಪಂದದ ಪ್ರಕಾರ ದಿನಾಂಕ 25-2-96ಕ್ಕೆ ಮುಕ್ತಾಯವಾಗಬೇಕಾಗಿತ್ತು. ಗುತ್ತಿಗೆದಾರರು ಕೆಲಸವನ್ನು ಪೂರ್ಣ ಸ್ಥಗಿತಗೊಳಿಸಿದ್ದಾರೆ. ಆದುದರಿಂದ ಗುತ್ತಿಗೆದಾರರ ಗುತ್ತಿಗೆಯನ್ನು ದಿನಾಂಕ:31-3-2000ರಂದು ರದ್ದುಗೊಳಿಸಿ, ಬಾಕಿ ಕೆಲಸಕ್ಕಾಗಿ ಪುನಃ ಗುತ್ತಿಗೆ ಕರೆಯಲು ಕ್ರಮ ತೆಗೆದುಕೊಳ್ಳಲಾಗಿದೆ. ಈ ಕೆಲಸಕ್ಕೆ ಇದುವರೆಗೆ ತಗಲಿರುವ ವೆಚ್ಚ ರೂ. 33.89 ಲಕ್ಷಗಳು.